ಡಾ॥ ಆರ್. ನಾಗನಗೌಡ.—ಹಾಗೆ ಅವುಗಳು ಕೆಟ್ಟುಹೋಗಿದ್ದರೆ ಅವುಗಳನ್ನು ರಿಪೇರಿ ಮಾಡಿಸ ಲಾಗುವುದು.

ಶ್ರೀ ಕೆ. ಪ್ರಭಾಕರ್.—ಹಾಗಾದರೆ ಇನ್ನು ಮುಂದಕ್ಕಾದರೂ ಸರಿಯಾಗಿ ಕೆಲಸ ಮಾಡಬಲ್ಲಂಥ ಪಂಪ್‌ಸೆಟ್‌ಗಳನ್ನು ರೈತರಿಗೆ ಸಕಾಲಕ್ಕೆ ತಪ್ಪದಹಾಗೆ ಒದಗಿಸಲು ಆ ವ್ಯವಸಾಯದ ಇಲಾಖೆಯಲ್ಲಿ ತಾವು ಒಂದು ಏರ್ಪಾಡನ್ನು ಮಾಡುವಿರಾ?

ಡಾ॥ ಆರ್. ನಾಗನಗೌಡ.—ಖಂಡಿತ ಮಾಡು ತ್ತೇವೆ.

Commercial Crops (Expert Survey)

Q.—522. **Sri K. V. BYRE GOWDA** (Bangalore North).—

Will the Government be pleased to state:—

(*a*) whether any survey is being conducted for exporting the surplus commercial crops in the State such as onion, potato, groundnuts, tobacco, etc.;

(*b*) the quantity of the above crops grown in each place during this year?

A.—**Dr. R. NAGAN GOWDA** (Minister for Agriculture).—

(*a*) Yes.

(*b*) Please see the statement appended below.

Statement showing the Districtwise Acreage and Production figures of Onions, Potatoes, Groundnuts and Tobacco for the year 1953-54 (Production in Tons).

Sl. No.	District	Onions		Potatoes	
		Acreage	Production	Acreage	Production
	1	2	3	4	5
1	Bangalore	1,455	4,547	2,725	12,317
2	Kolar	1,770	5,531	2,076	9,382
3	Tumkur	215	672	...	...
4	Mysore	2,149	6,716	328	659
5	Mandya	2,822	8,819	...	...
6	Hassan	1,282	4,006	4,690	9,422
7	Shimoga	49	153	...	..
8	Chikmagalur	1,516	4,737	1,200	2,411
9	Chitaldrug	5,368	16,775	...	...
10	Bellary	493	1,541	...	...
	Total ...	17,119	53,497	11,019	34,191

Sl. No.	District	Groundnuts		Tobacco	
		Acreage	Production	Acreage	Production
		6	7	8	9
1	Bangalore	19,519	9,670	59	63
2	Kolar	59,955	14,987	2 024	445
3	Tumkur	43,780	2,202	1,~41	188
4	Mysore	42,185	19 162	17,869	1,858
5	Mandya	21,000	6,549	1,195	225
6	Hassan	3,380	1,235	1,295	140
7	Shimoga	21,694	3,549	126	14
8	Chikmagalur	2,668	139	166	13
9	Chitaldrug	76,023	11,369	2,509	734
10	Bellary	1,52,629	58,429	2,550	892
	Total ...	4,42,833	1,27,191	29,634	4,582

ಶ್ರೀ ಕೆ. ವಿ. ಬೈರೇಗೌಡ.—ಈ ಬಗ್ಗೆ ತಾವು ಇಲ್ಲಿಯವರೆಗೆ ಒಂದು ನರ್ವೇನಡೆಸಿ ಈ ಸಾಮಾನುಗಳು ನಮ್ಮ ದೇಶದಲ್ಲಿ ಎಷ್ಟು ಉತ್ಪತ್ತಿಯಾಗುತ್ತವೆ, ನಮ್ಮ ದೇಶಕ್ಕೆ ಬೇಕಾಗುವ ಪ್ರಮಾಣವೆಷ್ಟು, ಉಳಿಯುವು ದೆಷ್ಟು, ಎಷ್ಟನ್ನು ನಾವು ಹೊರಗಡೆಗೆ ರಫ್ತ್ ಮಾಡ ಬಹುದು, ಎಂಬೀವಿಚಾರಗಳ ಬಗ್ಗೆ ಜನರಿಗೆ ಏನಾದ ರೊಂದು ತಿಳಿವಳಿಕೆಯನ್ನು ಕೊಟ್ಟಿದ್ದೀರಾ?

*ಡಾ॥ ಆರ್. ನಾಗನಗೌಡ.—ಈ ಹಿಂದೆ ಸರ್ಕಾರ ನರ್ವೆ ನಡೆಸಿದೆ. ಈಗ ನನ್ನಲ್ಲಿ ಆ ಅಂಕಿ ಅಂಶ ಗಳಿರುವುದಿಲ್ಲ. ಆದರೆ ಈಗ ನಾವು ನಮ್ಮ ಸ್ಟೇಟಿ ನಿಂದ ಹೊರಗಡೆಗೆ ಆವರೇಜ್ ಆಗಿ ಎಷ್ಟನ್ನು ರವಾನೆ ಮಾಡಬಹುದು ಅನ್ನತಕ್ಕ ಬಗ್ಗೆ ತಿಳಿವಳಿಕೆ ಕೊಟ್ಟಿದ್ದೇವೆ. ಈಗನದ್ಯಕ್ಕೆ ನಮ್ಮಲ್ಲಿಂದ ಹೊರಗಡೆಗೆ 19 ಸಾವಿರ ಟ್ಞ ಅಲೂಗಡ್ಡೆ, 9 ಸಾವಿರ ಟ್ಞ ಬೆಲ್ಲ; 5 ಸಾವಿರ ಟ್ಞ ಈರುಳ್ಳಿಯನ್ನು ರಫ್ತ್ ಮಾಡಬಹು ದೆಂದು ತಿಳಿಸಿರುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ಈಗ ತಾವು ತಿಳಿಸಿರುವ ಅಭಿಪ್ರಾಯಕ್ಕನುಸಾರವಾಗಿ ನಮ್ಮ ದೇಶದ ಉಪ ಯೋಗಕ್ಕೆ ಬೇಕಾದುದನ್ನು ಉಳಿಸಿಕೊಂಡು ಬಾಸ್ತಿ ಯಾಗುವ ಮಾಲನ್ನು ಹೊರಗಡೆಗೆ ರವಾನೆ ಮಾಡಲು ತಾವೇನಾದರೂ ಒಂದು ವ್ಯವಸ್ಥೆಯನ್ನು ಏರ್ಪಾಡು ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಮಾಡಿದ್ದೇವೆ. ಈಗಲೂ ಸಹಿತ ಯಾರಾದರೂ ರಫ್ತ್ ಮಾಡಲು ಅವ ಕಾಶ ಮಾಡಿಕೊಡಬೇಕೆಂದು ಕೇಳಿದರೆ ಅವರಿಗೂ ಅನು ಕೂಲಮಾಡಿ ಕೊಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ.—ಈ ವಸ್ತುಗಳನ್ನು ಉತ್ಪತ್ತಿ ಮಾಡಲು ಖರ್ಚಿಷ್ಟಾಗುತ್ತದೆ ಅನ್ನುವುದನ್ನು ತಾವು ತಿಳಿದಿದ್ದೀರಾ?

ಡಾ॥ ಆರ್. ನಾಗನಗೌಡ.—ನದ್ಯಕ್ಕೆ ಆ ವಿವರ ಗಳೆಲ್ಲಾ ನನ್ನಲ್ಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ತಾವು ಈವರೆಗಾಗಲೇ ಈ ವಸ್ತುಗಳ ಪೈಕಿ ಅಲೂಗಡ್ಡೆ ಮತ್ತು ನೆಲಗಡಲೆಕಾಯಿ ಈ ವಸ್ತುಗಳನ್ನು ಎಷ್ಟು ಪ್ರಮಾಣ ಹೊರಗಡೆಗೆ ಹೋಗಲು ಅವಕಾಶ ಕೊಟ್ಟಿದ್ದೀರಿ?

ಡಾ॥ ಆರ್. ನಾಗನಗೌಡ.—ಈಗತಾನೆ ನಾನು 19 ಸಾವಿರ ಟ್ಞ ಅಲೂಗಡ್ಡೆಯನ್ನು ಹೊರಗಡೆಗೆ ರಫ್ತ್ ಮಾಡಬಹುದೆಂದು ಅವಕಾಶ ಕೊಡಲಾಗಿದೆ ಯಂತ ಹೇಳಿದೆ.

Sri K. LAKKAPPA.—Groundnuts?

ಡಾ॥ ಆರ್. ನಾಗನಗೌಡ.—ನಮ್ಮ ಎಸ್ಟಿಮೇಟ್ ಪ್ರಕಾರ ಈ ನೆಲಗಡಲೆಕಾಯಿ ಒಂದು ಲಕ್ಷ 27 ಸಾವಿರ ಟ್ಞಲ್ಲರೆ ಟ್ಞ ಉತ್ಪತ್ತಿಯಾಗುತ್ತದೆ. The estimated production is in the order of 1,27,000 tons. The amount that is available for export is quite large.

ಶ್ರೀ ಕೆ. ಲಕ್ಕಪ್ಪ.—ಈಗ ಈ ಎಕ್ಸ್‌ಪೋರ್ಟ್ ಪರ್ಮಿಟ್ಟುಗಳನ್ನು ಯಾರು ಕೊಡತಕ್ಕವರು?

ಡಾ॥ ಆರ್. ನಾಗನಗೌಡ.—ಇಂಡಿಯ ಸರ್ಕಾರ ದವರು.

ಶ್ರೀ ಕೆ. ಲಕ್ಕಪ್ಪ.—ಇಲ್ಲಿಯತನಕ ತಾವು ನಮ್ಮ ಮೈಸೂರು ದೇಶದಲ್ಲಿ ಯಾರಿಗಾದರೂ ಲೈಸೆನ್ಸ್ ಕೊಡುವುದಕ್ಕೆ ಅಂದರೆ ಎಕ್ಸ್‌ಪೋರ್ಟ್ ಪರ್ಮಿಟ್ಟು ಗಳನ್ನು ಕೊಡಿಸುವುದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ?

ಡಾ॥ ಆರ್. ನಾಗನಗೌಡ.—ಆ ಇಂಫರ್‌ಮೇಷನ್ ಈಗ ನನ್ನಲ್ಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮೈಸೂರಿನಲ್ಲಿ ಯಾರಿಗಾದರೂ ಪರ್ಮಿಟ್ ಕೊಡಿಸಿದ್ದೀರಾ?

Dr. R. NAGAN GOWDA.—I would like to have notice about that.

ಶ್ರೀ ಕೆ. ಲಕ್ಕಪ್ಪ.—ನಮ್ಮ ದೇಶದಲ್ಲಿ ಇಂಥಿಂಥ ಬೆಳೆ ಇಷ್ಟಿಷ್ಟು ಹೆಚ್ಚಾಗಿ ಉಳಿಯುತ್ತದೆ, ಇದನ್ನು ನಮ್ಮ ದೇಶದಲ್ಲಿಯಾರು ಬೇಕಾದರೂ ಹೊರಗಿನ ದೇಶಕ್ಕೆ ಕಳು ಹಿಸಬಹುದೆಂದು ತಾವೇನಾದರೂ ಒಂದು ಬಹಿರಂಗ ಹೇಳಿಕೆಯನ್ನು ಹೊರಡಿಸಿದ್ದೀರಾ?

ಡಾ॥ ಆರ್. ನಾಗನಗೌಡ.—ನಾವೇನೂ ಆರೀತಿ ಬಹಿರಂಗವಾಗಿ ಪಬ್ಲಿಷ್ ಮಾಡಿಲ್ಲ. ಈ ಹಿಂದೆ ಈ ಬೆಲ್ಲದ ಧಾರಣೆ ಬಿದ್ದು ಹೋಗಿದ್ದಂಥ ಸಂದರ್ಭದಲ್ಲಿ ಇಂಡಿಯಾ ಸರ್ಕಾರದವರು ಮಾತ್ರ ಹಾಗೆ ಒಂದು ಬಹಿರಂಗವಾಗಿ ಬುಕ್‌ಲೆಟ್‌ನ್ನು ಅಚ್ಚು ಹಾಕಿಸಿ ಹೊರಡಿಸಿದ್ದರು.

Sri Mulka GOVINDA REDDY.—May I know whether the Mysore Government have applied for any quota for exporting these commodities outside India?

Dr. R. NAGAN GOWDA.—Notice.

ಶ್ರೀ ಜಿ. ಪಾಪಣ್ಣ.—ಈ ಅಂಕಿ ಅಂಶಗಳನ್ನು ತಾವೇ ಹಾಗೆ ತಯಾರು ಮಾಡಿದ್ದೀರೋ ಅಥವಾ ಏನಾದರೊಂದು ನರ್ವೆ ನಡೆಸಿ ಈ ಅಂಕಿ ಅಂಶ ಗಳನ್ನು ತಯಾರು ಮಾಡಿಸಿದ್ದೀರೋ? ಅಥವಾ ಇವು ಗಳನ್ನು ಹಾಗೆ ಪಹಣಿ ಲೆಕ್ಕಗಳ ಆಧಾರದಮೇಲೆ ತಯಾರು ಮಾಡಿಸಿದ್ದೀರೋ?

ಡಾ॥ ಆರ್. ನಾಗನಗೌಡ.—ನಮಗೆ ಈ ಅಂಕಿ ಅಂಶಗಳನ್ನೆಲ್ಲಾ ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್ ನವರು ಒದಗಿಸಿರುತ್ತಾರೆ.

ಶ್ರೀ ಜಿ. ಪಾಪಣ್ಣ.—ಈಗ ತಾವು ಒದಗಿಸಿರುವ ಉತ್ತರದಲ್ಲಿ ಯಾವ ಯಾವ ಜಿಲ್ಲೆಗಳನ್ನೋ ತಿಳಿಸಿದ್ದೀರಿ. ಆದರೆ ಈ ಬೆಳೆಗಳೆಲ್ಲಾ ಸಾಧಾರಣವಾಗಿ ಹೆಚ್ಚಾಗಿ ಬೆಳೆಯುವುದು ಬೆಂಗಳೂರು, ಕೋಲಾರ, ಬಳ್ಳಾರಿ ಆದಕಾರಣ ತಾವು ಈಗ ಒದಗಿಸಿರತಕ್ಕಂಥ ಈ ಅಂಕಿ ಅಂಶಗಳೆಲ್ಲಾ ಖಚಿತವಾದವುಗಳೋ?

ಡಾ॥ ಆರ್. ನಾಗನಗೌಡ.—ಹೌದು. ಸರಿ ಯಾದಂಥ ಅಂಕಿ ಅಂಶಗಳಾಗಿವೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಈಗ ತಾವು ತಿಳಿ ಸಿರುವ ಪ್ರಕಾರ ನಮ್ಮಲ್ಲಿ ಹೆಚ್ಚಿಗೆ ಬೆಳೆದಿರತಕ್ಕಂಥ ವಸ್ತುಗಳನ್ನೆಲ್ಲಾ ಇಲ್ಲೇ ದಾಸ್ತಾನು ಮಾಡಿರು ತ್ತೀರೋ ಅಥವಾ ಅವುಗಳನ್ನೆಲ್ಲಾ ತಾವು ಇಂಡಿಯಾ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೀರೋ?

ಡಾ॥ ಆರ್. ನಾಗನಗೌಡ.—ನಮ್ಮಲ್ಲಿ ಯಾವ ಯಾವ ಸಾಮಾನುಗಳು ಹೆಚ್ಚಾಗಿರುತ್ತವೆಯೋ ಅಂಥವು ಗಳ ಬಗ್ಗೆ ಕೆಲವುವೇಳೆ ಅವುಗಳನ್ನು ಕಳುಹಿಸಿ ಕೊಡ ಬೇಕೆಂದು ಇಂಡಿಯಾ ಸರ್ಕಾರದವರೂ ಕೇಳುತ್ತಾರೆ. ಕೆಲವು ಸಲ ಹಾಗೆ ಅವರು ಕೇಳಿಯೂ ಇದ್ದರು, ನಾವೂ ಕಳುಹಿಸಿದ್ದೆವು. ಅವುಗಳನ್ನು ಅವರು ಅಲ್ಲಿಂದ ಮುಂದಕ್ಕೆ ರವಾನೆಮಾಡಿದರು.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ನಮ್ಮ ದೇಶದಲ್ಲಿ ಈ ಸಾಮಾನುಗಳೆಲ್ಲಾ ಇಷ್ಟಿಷ್ಟು ಬಾಸ್ತಿಯಾಗಿ ಬೆಳೆ ಯಲ್ಪಡುತ್ತದೆ. ಇವುಗಳನ್ನು ಹೊರಗೆ ರವಾನೆ ಮಾಡಲು ನಮ್ಮ ಜನಗಳಿಗೆ ಪರ್ಮಿಟ್ ಕೊಡಿ ಎಂಬು ದಾಗಿ ತಾವೇನಾದರೂ ಕೇಂದ್ರ ಸರ್ಕಾರಕ್ಕೆ ಬರೆದಿ ದ್ದೀರಾ?

Dr. R. NAGAN GOWDA.—The estimated production is obtained from the Statistical Department. ಹಿಂದೆ ಬೆಲ್ಲದ ಧಾರಣೆ ಕಡಮೆಯಾಗಿದ್ದಾಗ ಕೇಂದ್ರ ಸರ್ಕಾರದವರೇ ಬರೆದು ಬೆಲ್ಲವನ್ನು ಕಳುಹಿಸಿಕೊಡಿ ಎಂದು ಕೇಳಿದ್ದರು. ಅವರಿಂದ ಪರ್ಮಿಟ್ ಪಡೆದು ಆಗ ನಾವು ಎಕ್ಸ್‌ಪೋರ್ಟ್ ಮಾಡಿದ್ದೇವೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಮೊನ್ನೆತಾನೆ ತಾವು ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ನಾವು ಯಾವ ಪದಾರ್ಥಗಳಿಗೂ ಪರ್ಮಿಟ್ ಕೊಡಲು ಕೇಂದ್ರಕ್ಕೆ ಶಿಫಾರ್ಸು ಮಾಡಿಲ್ಲ ಎಂದು ಹೇಳಿದ್ದೀರಿ. ಈಗ ಶಿಫಾರ್ಸು ಮಾಡಲಾಗಿತ್ತು ಎಂದು ಹೇಳುತ್ತಿದ್ದೀರಿ. ಈ ಎರಡರಲ್ಲಿ ಯಾವುದು ನರಿ ?

ಅಧ್ಯಕ್ಷರು.—ಆ ದಿವಸ ಆಲೂಗೆಡ್ಡೆಯ ವಿಚಾರ ಮಾತ್ರ ಬಂದಿತ್ತು. ಈಗ ಅವರು ಬೆಲ್ಲದ ವಿಚಾರವಾಗಿ ಹೇಳಿದ್ದಾರೆ.

ಶ್ರೀ ಎಸ್. ಸಿ. ನಾಗಯ್ಯರೆಡ್ಡಿ.—ಯಾವುದಕ್ಕೂ ನಾವು ಶಿಫಾರ್ಸು ಮಾಡಲಲ್ಲ ಎಂದು ಹೇಗೆ ಹೇಳಿದರು ?

ಡಾ॥ ಆರ್. ನಾಗನಗೌಡ.—ಆ ದಿವಸ ಈ ಬೆಲ್ಲದ ವಿಚಾರ ಬಂದಿರಲಿಲ್ಲ.

Sri T. MARIAPPA.—In view of the large production of these two commodities—onions and potatoes—recently, have the Government of Mysore drawn the attention to the Government of India to the need for taking into consideration the quota available for Mysore for export ?

Dr. R. NAGAN GOWDA.—Yes, we have brought to the notice of the Government of India the need for creating facilities and giving some export quotas.

Sri T. MARIAPPA.—With regard to onions and groundnuts ?

Dr. R. NAGAN GOWDA.—I have already done it in the case of onions and jaggery; but, so far as grountnut is concerned, I think the Government of India is aware of the fact that there is an excess production of groundnut here and it depends upon the policy of the Government of India.

Short-term loans to raiyats.

Q.—627. **Sm. LAKSHMIDEVI RAMANNA** (Hoskote-Anekal).—

Will the Government be pleased to state :—

(*a*) the steps that have been taken to enable poor raiyats to get the benefit of the short-term loans intended for the welfare of the raiyats ;

(*b*) whether arrangements have been made in every Hobli headquarter to enable raiyats to draw this loan without any difficulty ?

A.—**Dr. R. NAGAN GOWDA** (Minister for Agriculture).—

(*a*) Four District Co-operative Central Banks including the one at Bellary are attending to sanction of short-term loans through the affiliated Societies.

Six more Banks are being organised in the remaining districts of Bangalore, Tumkur, Mysore, Chitaldrug, Chikmagalur and Kolar.

(*b*) Arrangements are made in the districts where District Co-operative Central Banks are working to disburse these short-term loans through the selected societies situated in Hoblis and Circle Headquarters.

The Apex Bank is dealing with Primary Societies similarly in the districts where there are no District Banks.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈ ಕೇಂದ್ರ ಸಹಕಾರ ಸಂಘಗಳ ಮೂಲಕ ರೈತರಿಗೆ ಸಾಲ ದೊರೆಯುವಂತೆ ಮಾಡಬೇಕಾಗಿದ್ದರೆ ಅವರೆಲ್ಲರೂ ಮೊದಲು ಆ ಸಂಘಗಳಿಗೆ ಸದಸ್ಯರಾದಮೇಲೆ ಅಲ್ಲವೇ ಅವರು ಸಾಲಕ್ಕೆ ಅರ್ಜಿ ಹಾಕಬೇಕಾದುದು ?

*ಡಾ॥ ಆರ್. ನಾಗನಗೌಡ.—ಆಯಾ ರೈತರಿಗೆ ಅವರ ಜಿಲ್ಲೆಯಲ್ಲಿ ಸಹಕಾರ ಸಂಘಗಳು ಇಲ್ಲದಿದ್ದರೆ ಅವರು ಬೇರೆ ಜಿಲ್ಲೆಗಳಿಗೆ ಸಾಲಕ್ಕೆ ಅರ್ಜಿ ಹಾಕಬೇಕಾಗುತ್ತದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಆಯಾ ಸ್ಥಳದಲ್ಲೇ ಒಂದುವೇಳೆ ಈ ಸೊಸೈಟಿಗಳಿದ್ದರೆ ಈ ಸಾಲದ ಅರ್ಜಿಗಳನ್ನು ಆಯಾ ಸೊಸೈಟಿಯವರೇ ಮಂಜೂರು ಮಾಡುತ್ತಾರೋ ಅಥವಾ ಅವುಗಳನ್ನು ಜಿಲ್ಲಾ ಕನಬೆಗಳಲ್ಲಿರುವಂಥ ಸೊಸೈಟಿಗಳಿಗೆ ಮಂಜೂರಾತಿಗಾಗಿ ಕಳುಹಿಸಬೇಕೋ ?

ಡಾ॥ ಆರ್. ನಾಗನಗೌಡ.—ಮೊದಲು ಸ್ಥಳೀಯ ಸಹಕಾರ ಸಂಘದವರು ಸಾಲಕ್ಕೆ ಶಿಫಾರ್ಸು ಮಾಡುತ್ತಾರೆ. ಜಿಲ್ಲಾ ಕನಬೆಯಲ್ಲಿರುವ ಸಹಕಾರ ಸಂಘದವರು ಅದನ್ನು ಮಂಜೂರು ಮಾಡುತ್ತಾರೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ನಾಲ್ಕು ಬ್ಯಾಂಕುಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಾಗಿ ಕೆಲಸ ಮಾಡುತ್ತಿವೆ ಎಂದು ಹೇಳುತ್ತೀರಿ. ಸಾಮಾನ್ಯ ರೈತ ಅರ್ಜಿ ಹಾಕಿದಮೇಲೆ ಎಷ್ಟು ಕಾಲದವರೆಗೆ ಈ ಹಣ ಅವನಿಗೆ ತಲುಪುತ್ತದೆ ಎಂಬುದನ್ನು ಪರಿಶೀಲನೆ ಮಾಡಿದ್ದೀರಾ ?

ಡಾ॥ ಆರ್. ನಾಗನಗೌಡ.—Actual figures ನಮ್ಮ ಹತ್ತಿರವಿಲ್ಲ. ಆದರೂ ನಾವು ಅವನಿಗೆ ಹೈರು ಬೆಳೆನುವುದಕ್ಕೆ ಬೇಕಾದ ಸಮಯದಲ್ಲಿ ದುಡ್ಡು ಸಿಕ್ಕುವ ಹಾಗೆ ಏರ್ಪಾಡು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಸ್ಥಳದಲ್ಲಿರ ತಕ್ಕಂಥ ಸೊಸೈಟಿಯವರು ಮಂಜೂರು ಮಾಡಬೇಕು. ಆಮೇಲೆ ಜಿಲ್ಲಾ ಬ್ಯಾಂಕು ಮಂಜೂರು ಮಾಡಬೇಕು.